# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 83 |
| ಉತ್ತರಿಸಬೇಕಾದ ದಿನಾಂಕ | : | 04-03-2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯಲ್ಲಿರುವ ವ್ಯವಸಾಯ ಸಹಕಾರ ಸಂಘಗಳೆಷ್ಟು; ಇವುಗಳಲ್ಲಿ ಸಾಲಕ್ಕಾಗಿ ಬಂದ ಅರ್ಜಿಗಳೆಷ್ಟು; ಹಾಗೂ ಸಹಕಾರ ಸಂಘಗಳಿಂದ ರೈತರಿಗೆ ನೀಡಿರುವ ಸಾಲದ ಮೊತ್ತವೇನು; (ತಾಲೂಕುವಾರು ವಿವರ ನೀಡುವುದು) | ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 111 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿರುತ್ತವೆ.<br>ದಿನಾಂಕ:31-01-2025ರ ಅಂತ್ಯಕ್ಕೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ 34376 ರೈತರು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದು, ರೂ.21162.30 ಲಕ್ಷಗಳ ಸಾಲ ವಿತರಣೆ ಮಾಡಲಾಗಿದೆ. ತಾಲ್ಲೂಕುವಾರು ವಿವರವನ್ನು ಈ ಕೆಳಕಂಡಂತಿದೆ. |

| ಕ್ರ.ಸಂ | ತಾಲ್ಲೂಕಿನ ಹೆಸರು | ವ್ಯವಸಾಯ ಸಹಕಾರ ಸಂಘಗಳ ಸಂಖ್ಯೆ | ರೈತರಿಂದ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ರೈತರಿಗೆ ವಿತರಿಸಿದ ಸಾಲದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 01 | ಕೊಪ್ಪಳ | 28 | 5161 | 4298.21 |
| 02 | ಗಂಗಾವತಿ | 26 | 9687 | 7154.73 |
| 03 | ಕುಷ್ಟಗಿ | 30 | 12739 | 5423.36 |
| 04 | ಯಲಬುರಗ | 27 | 6789 | 4286.00 |
| | ಒಟ್ಟು | 111 | 34376 | 21162.30 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಸಾಲಕ್ಕಾಗಿ ಬಂದ ಅರ್ಜಿಗಳಲ್ಲಿ ಸಾಲ ಸಿಗದೇ ಇರುವ ರೈತರ ಸಂಖ್ಯೆ ಎಷ್ಟು; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು; (ವಿವರ ನೀಡುವುದು) ಮತ್ತು ಈ ಹಿಂದೆ ಸಾಲ ಪಡೆದ ರೈತರಿಗೆ ಬೆಳೆ ಹಾನಿಯಾದ ರೈತರಿಗೆ ಸಾಲ ಮನ್ನಾ ಮಾಡಲಾಗಿದೆಯೇ; (ವಿವರ ನೀಡುವುದು) | ಅರ್ಜಿ ಸಲ್ಲಿಸಿದ ರೈತರಿಗೆ ಸಾಲ ಸಿಗದಿರುವ ಬಗ್ಗೆ ಪ್ರಕರಣ ವರದಿಯಾಗಿರುವುದಿಲ್ಲ ಹಾಗೂ ಸಾಲಮನ್ನಾ ಮಾಡುವ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಇ) | ಈ ಸಹಕಾರ ಸಂಘಗಳಿಂದ ರೈತರಿಗೆ ಯಾವ ಯಾವ ಸಾಲ ಸೌಲಭ್ಯ ನೀಡಲಾಗುತ್ತಿದೆ; (ವಿವರ ನೀಡುವುದು) | ಸಹಕಾರ ಸಂಘಗಳಿಂದ ರೈತರಿಗೆ ನೀಡಲಾಗುತ್ತಿರುವ ಸಾಲ ಸೌಲಭ್ಯಗಳು:<br>1) ಅಲ್ಪಾವಧಿ ಕೃಷಿ ಸಾಲ<br>2) ಮಧ್ಯಮಾವಧಿ ಕೃಷಿ ಸಾಲ<br>3) ಹೈನುಗಾರಿಕೆ ಸಾಲ<br>ದಿನಾಂಕ:01.04.2024 ರಿಂದ ದಿನಾಂಕ:31.03.2025 ರವರೆಗೆ ಸಹಕಾರ ಸಂಘಗಳಿಂದ ರೈತರಿಗೆ ನೀಡಲಾಗುತ್ತಿರುವ ಸಾಲದ ವಿವರ ಕೆಳಕಂಡಂತಿದೆ. |

| ಕ್ರಸಂ | ಸಾಲದ ವಿಧ | ಸಂಖ್ಯೆ | ರೈತರಿಗೆ ವಿತರಿಸಿದ ಸಾಲದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಅಲ್ಪಾವಧಿ ಕೃಷಿ ಸಾಲ | 34356 | 20930.01 |
| 2 | ಮಧ್ಯಮಾವಧಿ ಕೃಷಿ ಸಾಲ | 20 | 232.29 |
| | **ಒಟ್ಟು** | **34376** | **21162.30** |

| | | |
|---|---|---|
| ಈ) | ಈಗ ನೀಡುತ್ತಿರುವ ಸಾಲದ ಮೊತ್ತವೇನು; ಈ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಚಿಂತಿಸಿದೆಯೇ? (ವಿವರ ನೀಡುವುದು) | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ರೈತರಿಗೆ ಈ ಕೆಳಕಂಡಂತೆ ಸಾಲಗಳನ್ನು ನೀಡಲಾಗುತ್ತಿದೆ.<br>1. ರೂ. 5.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳದ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲಾಗುತ್ತಿದೆ.<br>2. ರೂ.15.00 ಲಕ್ಷಗಳವರೆಗೆ ಮಧ್ಯಮಾವಧಿ ಕೃಷಿ ಸಾಲಗಳನ್ನು ಶೇಕಡ 3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.<br><br>ಸಾಲದ ಮೊತ್ತವನ್ನು ಹೆಚ್ಚಿಸುವ ಕುರಿತು ಪ್ರಸ್ತಾವನೆ ಇರುವುದಿಲ್ಲ. |

**ಸಂಖ್ಯೆ: ಸಿಒ 45 ಸಿಎಲ್ಎಸ್ 2025**

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**